# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

## ಕನ್ನಡ ಇಲಾಖಾ ಪರೀಕ್ಷೆಗಳು – ಡಿಸೆಂಬರ್– 2021

## ಕನ್ನಡ ಭಾಷಾ ಪರೀಕ್ಷೆ – ಪತ್ರಿಕೆ–1

(ಪುಸ್ತಕಗಳು, ಟಿಪ್ಪಣಿಗಳು, ಕೈಪಿಡಿಗಳು ಇತ್ಯಾದಿಗಳ ಉಪಯೋಗಕ್ಕೆ ಅವಕಾಶವಿಲ್ಲ)

ದಿನಾಂಕ: 06.12.2021 ಗರಿಷ್ಠ ಅಂಕಗಳು–100 ಸಮಯ: ಬೆಳಗ್ಗೆ 9.30 ರಿಂದ 11.30 ರವರೆಗೆ

---

**1. ಈ ಕೆಳಕಂಡ ವಾಕ್ಯಗಳನ್ನು ಯಾವ ಪಾಠದಿಂದ ಆರಿಸಿದೆ? ಯಾರು? ಯಾರಿಗೆ? ಯಾವ ಸಂದರ್ಭದಲ್ಲಿ ಹೇಳಿದರು?ವಿವರಿಸಿ:– (ಐದಕ್ಕೆ ಮಾತ್ರ ಉತ್ತರಿಸಿ)** 20 ಅಂಕಗಳು

ಅ) "ಸಾಯುವ ಸಮಯದಲ್ಲಿ ಇಂಥಾ ಕೆಲಸ ಏಕೆ ಮಾಡಿದೆ?"

ಆ) "ರಾಮಯ್ಯ ತನ್ನ ಚಿಕ್ಕಮ್ಮನಿಗೆ ಮಾಡಿರುವುದು ವಂಚನೆ. ಅವಳ ಹೊಲ ಗದ್ದೆ ರಾಮಯ್ಯ ಹಿಂದಕ್ಕೆ ಅವಳಿಗೆ ಕೊಟ್ಟುಬಿಡಬೇಕು"

ಇ) "ಒಂದು ವಿಷಯವನ್ನು ಕೇಳಿದರೆ ಅದನ್ನು ತಮ್ಮ ಮನಸ್ಸಿನಲ್ಲಿ ಇಟ್ಟುಕೊಂಡು ಅದರಂತೆ ಆಚರಣೆಯಲ್ಲಿ ತೊಡಗುತ್ತಾರೆ."

ಈ) "ಈಕೆಯನ್ನು ಲೂಟಿ ಮಾಡಿ ತಂದೆ ಎಂದು ಹೇಳಿಕೊಳ್ಳಲು ನೀನು ಹೆಮ್ಮೆ ಪಡಬೇಕೇನು?"

ಉ) "ಎತ್ತು ಎಲ್ಲಿಯಾದರೂ ಹಾಲು ಕೊಡುತ್ತದೆಯೇ? ಹಕೀಮ್?"

ಊ) "ಇದೇ ಮಹಾರಾಜ, ನಾನು ತಂದಿರುವ ಅಪೂರ್ವ ನಿಧಿ."

ಋ) "ಲೋ ಸಾದು! ನಿನ್ನ ಪಾತ್ರೆ ಸ್ವಲ್ಪ ಕೊಡು. ನಾವು ನೀರು ಕುಡಿಯಬೇಕಾಗಿದೆ"

**2. ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದಕ್ಕೆ ಒಂದು ಪುಟ ಮೀರದಂತೆ ವಿವರಣೆ ಬರೆಯಿರಿ:–** 20 ಅಂಕಗಳು

ಅ. ಚಿತ್ರಗಾರ ರವಿವರ್ಮ.

ಆ. ಎತ್ತು ಕರೆದ ಹಾಲು.

**3. ಈ ಕೆಳಗಿನ ಯಾವುದಾದರೂ ಐದಕ್ಕೆ ಸಮಾನಾರ್ಥಕ ಪದ ಬರೆಯಿರಿ:–** 5 ಅಂಕಗಳು

ಅ ದಿನಕರ ಆ. ಕುವರ ಇ. ಬಾನು ಈ. ಕವನ ಉ. ಕೈದಿ ಊ. ರಂಧ್ರ ಋ. ಶುರು

**4. ಈ ಕೆಳಗಿನ ಯಾವುದಾದರೂ ಐದಕ್ಕೆ ವಿರುದ್ಧ ಪದ ಬರೆಯಿರಿ:–** 5 ಅಂಕಗಳು

ಅ ಮುಕ್ತಾಯ ಆ. ಮೃದು ಇ. ಕನಿಷ್ಠ ಈ. ಬೆಳಕು ಉ. ನಗು ಊ ಕಷ್ಟ ಋ. ನೋವು

**5. ಈ ಕೆಳಗಿನ ಯಾವುದಾದರು ಐದು ಅಂಕಿಗಳನ್ನು ಅಕ್ಷರಗಳಲ್ಲಿ ಬರೆಯಿರಿ:–** 5 ಅಂಕಗಳು

ಅ. 2,00,995 ಆ. 2,45,36,200 ಇ. 76,25,11,000 ಈ. 5,00,005 ಉ. 32,009

ಊ. 70,65,432 ಋ. 80,071

**6. ಈ ಕೆಳಗಿನವುಗಳಲ್ಲಿ ಯಾವುದಾದರು ಐದಕ್ಕೆ ಅಂಕಿಯಲ್ಲಿ ಬರೆಯಿರಿ:–** 5 ಅಂಕಗಳು.

ಅ. ಹತ್ತು ಸಾವಿರದ ಎಪ್ಪತ್ತು.

ಆ. ಮೂರು ಕೋಟಿ ಇಪ್ಪತ್ತೆಂಟು ಲಕ್ಷದ ಆರು ನೂರ ಅರವತ್ತೈದು.

ಇ. ಹದಿನೆಂಟು ಲಕ್ಷ ಏಳು ಸಾವಿರದ ನಾಲ್ಕು ನೂರಾ ಐವತ್ತೆಂಟು .

ಈ. ತೊಂಭತ್ತು ಕೋಟಿ.

ಉ. ಎಂಟು ಲಕ್ಷದ ಎಂಟು

ಊ. ಹದಿನೈದು ಲಕ್ಷದ ನೂರ ಐದು

ಋ. ಒಂದು ಕೋಟಿ ಐವತ್ತು ಲಕ್ಷದ ಐವತ್ತು ಸಾವಿರದ ಐವತ್ತೊಂದು

**7. ಈ ಕೆಳಗಿವುಗಳಲ್ಲಿ ಯಾವುದಾದರೂ ಐದಕ್ಕೆ ಏಕವಚನ ಪದಗಳನ್ನು ಬರೆಯಿರಿ:–** 5 ಅಂಕಗಳು

ಅ. ಮನೆಗಳು ಆ. ಹಸುಗಳು ಇ. ರಾಜರು ಈ. ಕಾಲುಗಳು ಉ. ಪ್ರಶ್ನೆಗಳು ಊ. ವಜ್ರಗಳು ಋ. ಜನರು

8. ಈ ಕೆಳಗಿವುಗಳಲ್ಲಿ ಯಾವುದಾದರೂ ಐದಕ್ಕೆ ಲಿಂಗವನ್ನು ಬರೆಯಿರಿ:- 5 ಅಂಕಗಳು

ಅ. ಅಮ್ಮಾಜಿ ಆ. ತಂದೆ ಇ. ಗೌಡತಿ. ಈ ನರ್ತಕ ಉ. ಗಾಯಕ ಊ. ಗಂಡ ಋ. ಮಗಳು

9. ಈ ಕೆಳಗಿವುಗಳಲ್ಲಿ ಯಾವುದಾದರೂ ಐದಕ್ಕೆ ಬಹುವಚನ ಪದಗಳನ್ನು ಬರೆಯಿರಿ:- 5 ಅಂಕಗಳು

ಅ. ಒಂಟೆ ಆ. ಅಂಕಿ ಇ. ಶಾಲೆ ಈ. ಬಾಲಕಿ ಉ. ಒಡವೆ ಊ. ವಾಹನ ಋ. ಬಟ್ಟೆ

10. ಈ ಕೆಳಗಿನವುಗಳನ್ನು ಹೊಂದಿಸಿ ಬರೆಯಿರಿ 5 ಅಂಕಗಳು

| | |
|---|---|
| ಅ. ಪುಣ್ಯಕೋಟಿ | i) ತಾಜ್‌ಮಹಲ್. |
| ಆ. ಹದಿಬದೆಯಧರ್ಮ | ii) ಗೋವು. |
| ಇ. ದಾಸರು | iii) ವಚನಗಳು |
| ಈ. ಶರಣರು | iv) ಸಂಚಿಯಹೊನ್ನಮ್ಮ |
| ಉ. ಆಗ್ರ | v) ಕೀರ್ತನೆಗಳು. |

11. ಈ ಕೆಳಗಿನ ಪ್ರಶ್ನೆಗಳಗೆ ಸಂಕ್ಷಿಪ್ತವಾಗಿ ಉತ್ತರಿಸಿ 10 ಅಂಕಗಳು

ಅ. ಚಿಕ್ಕಮ್ಮ ಕರೆದ ಪಂಚಾಯಿತಿಗೆ ಯಾರು ತೀರ್ಪುಗಾರರಾಗಿದ್ದರು?
ಆ. ಡಿಂಭನು ಉಂಗುರವನ್ನು ಎಲ್ಲಿಂದ ಕದ್ದ?
ಇ. ಶರಣಪ್ಪ ಸಾಂಬಾಜಿಯ ಹತ್ತಿರ ಸಾಲವನ್ನು ಏಕೆ ತೆಗೆದುಕೊಂಡ?
ಈ. ರವಿವರ್ಮರ ಕಲೆಯ ವಿಶೇಷತೆ ಏನು?
ಉ. ಬೀರಬಲ್ಲನ ಸಮಸ್ಯೆಯನ್ನು ಯಾರು ಬಗೆಹರಿಸಿದರು?
ಊ. ಸಾಧುವು ರಾಜನ ನೌಕರರಿಗೆ ಏಕೆ ಸಹಾಯ ಮಾಡಲಿಲ್ಲ?

12. ಈ ಕೆಳಗಿನ ಪಾಠವನ್ನು ಓದಿ ಸಂಬಂಧಿಸಿ ಪ್ರಶ್ನೆಗಳಗೆ ಉತ್ತರ ಬರೆಯಿರಿ 10 ಅಂಕಗಳು

ತಲಕಾಡಿನ ಇತಿಹಾಸದಲ್ಲಿ ಗಂಗರ ಇತಿಹಾಸ, ಜೈನಧರ್ಮದ ವಿವರಣೆ ಇದೆ. ಕನ್ನಡ ಸಾಹಿತ್ಯದ ಕಥನವಿದೆ. ಹೊಯ್ಸಳ ವಾಸ್ತು ಶಿಲ್ಪದ ವಿವರಣೆ ಇದೆ. ಎಲ್ಲಕ್ಕೂ ಮಿಗಿಲಾಗಿ ಕನ್ನಡವೇ ಧರ್ಮ, ಕನ್ನಡವೇ ಬಾಳಿನ ಪರಿಪೂರ್ಣತೆಯೆಂದು ಬಗೆದು ಅದಕ್ಕಾಗಿ ಹೋರಾಡಿ ಮಡಿದ ವೀರರ ಉಜ್ವಲ ಚರಿತ್ರೆ ಇದೆ. ಗಂಗರ ರಾಜ್ಯ ಗಂಗವಾಡಿ ಎಂದು ಹೆಸರಾಗಿದೆ. ಅವರ ಮೊದಲ ರಾಜಧಾನಿ ಕೋಲಾರ, ಸುಮಾರು ಕ್ರಿ.ಶ.೫೦೦ ರ ಹೊತ್ತಿಗೆ ಕೋಲಾರದಿಂದ ಹರಿವರ್ಮ ರಾಜಧಾನಿಯನ್ನು ತಲಕಾಡಿಗೆ ತಂದನು. ಅಲ್ಲಿಂದ ಮುಂದಕ್ಕೆ ಐದು ಶತಮಾನಗಳವರೆಗೆ ಅಂದರೆ ಹತ್ತನೆಯ ಶತಮಾನದವರೆಗೂ ಗಂಗರು ಆಳ್ವಿಕೆ ನಡೆಸಿದರು.

ಮಾರಸಿಂಹ, ರಾಚಮಲ್ಲ, ರಕ್ಕಸಗಂಗರ ತಲಕಾಡು ಪುಣ್ಯ ಭೂಮಿ. ಅವರೊಂದಿಗೆ ಕೊನೆಯವರೆಗೂ ಒಂದು ಹಿರಿಯ ಜೀವ ಇದ್ದಿತು. ಅವನ ಹೆಸರು ಚಾವುಂಡರಾಯ. ಆತ ಮಾರಸಿಂಹ, ರಾಚಮಲ್ಲ, ರಕ್ಕಸಗಂಗರ ಮಂತ್ರಿ, ಅವನನ್ನು ಜನ ಹೆಸರು ಹಿಡಿದು ಕರೆಯುತ್ತಿರಲಿಲ್ಲ. "ರಾಯ", "ಅಣ್ಣ" ಎಂದು ಸಂಬೋಧಿಸುತ್ತಿದ್ದರು. ಅವನಿಗೆ ಕನ್ನಡದ ಏಳ್ಗೆಯ ಹಂಬಲವೇ ಹಂಬಲ ಸ್ವತ: ಕವಿ "ಚಾವುಂಡರಾಯ ಪುರಾಣ" ಎಂಬ ಹೆಸರಿನ ಅರವತ್ತ ಮೂರು ಪುಣ್ಯ ಪುರುಷರ ಚರಿತ್ರೆ ಅವನು ಕನ್ನಡಕ್ಕೆ ಕೊಟ್ಟ ಕಾಣಿಕೆ.

ಅ. ತಲಕಾಡಿನ ಇತಿಹಾಸದಲ್ಲಿ ಯಾವ ವಿವರಣೆ ಇದೆ?
ಆ. ಗಂಗರ ರಾಜ್ಯದ ಹೆಸರು ಮತ್ತು ಮೊದಲ ರಾಜಧಾನಿ ಯಾವುದು?
ಇ. ಹರಿವರ್ಮ ರಾಜಧಾನಿಯನ್ನು ಕೋಲಾರದಿಂದ ಎಲ್ಲಿಗೆ ತಂದನು?
ಈ. 'ರಾಯ' 'ಅಣ್ಣ' ಎಂದು ಯಾರನ್ನು ಕರೆಯುತ್ತಿದ್ದರು?
ಉ. ಚಾವುಂಡರಾಯ ಕನ್ನಡಕ್ಕೆ ಕೊಟ್ಟ ಕಾಣಿಕೆ ಏನು?

* * * * *

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

## ಕನ್ನಡ ಇಲಾಖಾ ಪರೀಕ್ಷೆಗಳು – ಡಿಸೆಂಬರ್-2021

## ಕನ್ನಡ ಭಾಷಾ ಪರೀಕ್ಷೆ - ಪತ್ರಿಕೆ-2

(ಪುಸ್ತಕಗಳು, ಟಿಪ್ಪಣಿಗಳು, ಕೈಪಿಡಿಗಳು ಇತ್ಯಾದಿಗಳ ಉಪಯೋಗಕ್ಕೆ ಅವಕಾಶವಿಲ್ಲ)

ದಿನಾಂಕ: 06.12.2021 ಗರಿಷ್ಠ ಅಂಕಗಳು-50 ಸಮಯ: ಮದ್ಯಾಹ್ನ 12.00 ರಿಂದ 1.00 ರವರೆಗೆ

**1. ಆಂಗ್ಲ ಭಾಷೆಗೆ ಅನುವಾದಿಸಿ:** 10 ಅಂಕಗಳು

ಯಶಸ್ವಿ ವ್ಯಕ್ತಿಗಳು ವಿಭಿನ್ನ ಸಾಮರ್ಥ್ಯಗಳನ್ನು ಹೊಂದಿರುತ್ತಾರೆ. ಅವರು ಏನಾಗಬೇಕೆಂಬ ಪರಿಕಲ್ಪನೆಗಾಗಿ ಅವರು ತಮ್ಮ ಜೀವನವನ್ನು ಕಾಯ್ದಿರಿಸುವುದಿಲ್ಲ. ಅವರು ತಮ್ಮ ಜ್ಞಾನವನ್ನು ಬಳಸಿಕೊಂಡು ಕೆಲಸವನ್ನು ಮಾಡಲು ಹಿಂಜರಿಯುವುದಿಲ್ಲ. ಅವರು ವಾಸ್ತವಗಳನ್ನು ಬೇರ್ಪಡಿಸಲು ಸಮರ್ಥರಾಗಿರುತ್ತಾರೆ. ಅವರು ಇತರರ ಮಾತನ್ನು ಕೇಳುತ್ತಾರೆ ಮತ್ತು ಮೌಲ್ಯಮಾಪನ ಮಾಡುತ್ತಾರೆ ಮತ್ತು ತಮ್ಮದೇ ತೀರ್ಮಾನಕ್ಕೆ ಬರುತ್ತಾರೆ. ಅವರು ತಮ್ಮ ಜೀವನದಲ್ಲಿ ನಡೆಯುವ ಎಲ್ಲದರ ಜವಾಬ್ದಾರಿಯನ್ನು ಹೊರುತ್ತಾರೆ. ಅವರು ತಮ್ಮನ್ನು ತಾವೇ ನಾಯಕ ಎಂದು ಭಾವಿಸುತ್ತಾರೆ. ಅವರು ವಿವಿಧ ಪರಿಸ್ಥಿತಿಗಳಿಗೆ ಸೂಕ್ತವಾಗಿ ಪ್ರತಿಕ್ರಿಯಿಸುತ್ತಾರೆ. ಅವರು ಯಾವಾಗಲೂ ಜನರ ಮತ್ತು ಪ್ರಪಂಚದ ಬಗ್ಗೆ ಎಚ್ಚರವಹಿಸುತ್ತಾರೆ ಮತ್ತು ಸುಧಾರಣೆಗಾಗಿ ಶ್ರಮಿಸುತ್ತಾರೆ.

**2. ಈ ಕೆಳಗಿನ ಪದಗಳನ್ನು ಆಂಗ್ಲ ಭಾಷೆಗೆ ಭಾಷಾಂತರಿಸಿ:** 10 ಅಂಕಗಳು.

ಅ. ಹಬ್ಬದ ಮುಂಗಡ ಆ. ಗ್ರಾಹಕ ಇ. ಸುತ್ತೋಲೆ ಈ. ಅಂದಾಜು ಉ ವಂತಿಗೆ
ಊ. ತಾಳೆ ಪಟ್ಟಿ ಋ. ಹೊಂದಾಣಿಕೆಗಳು ಎ. ಜಮೆ ಏ.ಸೋಮಾರಿ ಐ. ಸರ್ವೋಚ್ಚ

**3. ಕನ್ನಡ ಭಾಷೆಗೆ ಭಾಷಾಂತರಿಸಿ:** 10 ಅಂಕಗಳು

**Books – The best gift**

I have many friends at School. I love to play with them. In my neighborhood also there are many children who are my friends. But although I value their friendship a lot, I have another friend who is the dearest of all. That friend is my Library.

I have built a little Library of my own at home. Ever since I was born my parents have been collecting books for me. I often borrow books from my friends and school Library. I find that, I know a lot about various things, whereas my friends, who don't read books, don't know half of the things that I do. They love to hear the stories that I read. Some of my friends too have started enjoying reading books now. The best birthday gift that anyone can give is 'books'.

**4. ಈ ಕೆಳಗಿನ ಪದಗಳನ್ನು ಕನ್ನಡ ಭಾಷೆಗೆ ಅನುವಾದಿಸಿ:** 10 ಅಂಕಗಳು

ಅ. Enquiry ಆ. Earn Leave ಇ. Advance Pay ಈ Break in service

ಉ Defer ಊ. Code of Conduct ಋ Bridegroom ೠ. Mental Science

ಎ. Advanced Studies ಏ. Courage

**5. ಈ ವಾಕ್ಯಗಳನ್ನು ಕನ್ನಡಕ್ಕೆ ಅನುವಾದಿಸಿ:** **5 ಅಂಕಗಳು**

ಅ. I love my country.

ಆ. Work is worship.

ಇ. Always think positively.

ಈ Probationary period declaration

ಉ. Follow covid guidelines

**6. ಈ ಕೆಳಗಿನ ವಾಕ್ಯಗಳನ್ನು ಆಂಗ್ಲ ಭಾಷೆಗೆ ಭಾಷಾಂತರಿಸಿ:** **5 ಅಂಕಗಳು.**

ಅ. ತಾಜಮಹಲ್ ಆಗ್ರಾದಲ್ಲಿದೆ.

ಆ. ಬರೆಯುವ ಮೊದಲು ಯೋಚಿಸು.

ಇ. ಮಾಹಿತಿ ಹಕ್ಕು ಅಧಿನಿಯಮ–2005.

ಈ ಪಿಂಚಣಿ ಸೌಲಭ್ಯಕ್ಕೆ ಅರ್ಹತಾ ಸೇವೆ

ಉ ಆರೋಗ್ಯವೇ ಭಾಗ್ಯ

* * * * *